# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1026
ಮಾನ್ಯ ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 25.07.2024
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸುಳ್ಳು ಪ್ರಕರಣಗಳನ್ನು ಸಲ್ಲಿಸುವ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಕರ್ನಾಟಕ ಸರ್ಕಾರವು ಪ್ರಸ್ತಾಪಿಸಿದೆಯೇ; ಹಾಗಿದ್ದಲ್ಲಿ, ಅದರ ವಿವರಗಳು: | ಸುಳ್ಳು ಪ್ರಕರಣಗಳನ್ನು ಸಲ್ಲಿಸುವ ವ್ಯಕ್ತಿಗಳ ವಿರುದ್ಧ ಬಿ.ಎನ್.ಎಸ್ 2023 ರ ಕಲಂ 212 ಮತ್ತು ಕಲಂ 248 ರನ್ವಯ ಕ್ರಮ ಕೈಗೊಳ್ಳುವ ಅವಕಾಶವಿರುತ್ತದೆ. ಅದರಂತೆ, ಸುಳ್ಳು ಪ್ರಕರಣಗಳನ್ನು ದಾಖಲಿಸುವವರ ವಿರುದ್ಧ ಬಿ.ಎನ್.ಎಸ್ 2023 ರ ಕಲಂ 248 ರಡಿಯಲ್ಲಿ ಸಂಬಂಧಪಟ್ಟ ಘನ ನ್ಯಾಯಾಲಯದ ಅನುಮತಿ ಮೇರೆಗೆ ಕಾನೂನು ಕ್ರಮ ಕೈಗೊಳ್ಳಲಾಗುವುದು. |
| ಆ) | ಸುಳ್ಳು ಪ್ರಕರಣಗಳನ್ನು ಸಲ್ಲಿಸುವವರಿಗೆ ಸೆರೆಮನೆ ಅಥವಾ ಕಾರಾಗೃಹವಾಸ ಶಿಕ್ಷೆಯನ್ನು ನೀಡುವ ಉಪಬಂಧಗಳನ್ನು ಜಾರಿಗೆ ತರಲು ಸರ್ಕಾರವು ಪ್ರಸ್ತಾಪಿಸಿದೆಯೇ; | ಸುಳ್ಳು ಪ್ರಕರಣಗಳನ್ನು ಸಲ್ಲಿಸುವವರಿಗೆ ಈ ಕೆಳಕಂಡಂತೆ ಸೆರೆಮನೆ ಅಥವಾ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಬಹುದಾಗಿರುತ್ತದೆ.<br>➤ ಐ.ಪಿ.ಸಿ. ಯ ಕಲಂ 182 ರಡಿಯಲ್ಲಿ 6 ತಿಂಗಳು ಸೆರೆವಾಸ ಮತ್ತು ರೂ.1,000/- ವರೆಗೆ ದಂಡ ವಿಧಿಸಬಹುದಾಗಿರುತ್ತದೆ.<br>➤ ಐ.ಪಿ.ಸಿ. ಯ ಕಲಂ 211 ರಡಿಯಲ್ಲಿ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಸೆರೆವಾಸವನ್ನು ವಿಧಿಸಬಹುದಾಗಿರುತ್ತದೆ.<br>➤ ಬಿ.ಎನ್.ಎಸ್ 2023 ರ ಕಲಂ 217 ರಡಿಯಲ್ಲಿ ಸಹ 6 ತಿಂಗಳು ಸೆರೆವಾಸ ಮತ್ತು ರೂ.1,000/- ವರೆಗೆ ದಂಡ ವಿಧಿಸಬಹುದಾಗಿರುತ್ತದೆ.<br>➤ ಬಿ.ಎನ್.ಎಸ್ 2023 ರ ಕಲಂ 248 ರಡಿಯಲ್ಲಿ 5 ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಸೆರೆವಾಸ ಮತ್ತು ರೂ.2,00,000/- ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಬಹುದಾಗಿರುತ್ತದೆ.<br>➤ ಪ್ರಕರಣವು ಅಜೀವ ಕಾರಾಗೃಹವಾಸ ಅಥವಾ ಮರಣದಂಡನೆ ಅಥವಾ 7 ವರ್ಷಗಳು ಮತ್ತು ಅದಕ್ಕೂ ಮೀರಿದ ಆರೋಪಗಳಿದ್ದಲ್ಲಿ, 10 ವರ್ಷಗಳವರೆಗೆ ವಿಸ್ತರಿಸಬಹುದಾದ ಸೆರೆವಾಸ ಮತ್ತು ರೂ.2,00,000/- ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಬಹುದಾಗಿರುತ್ತದೆ. |
| ಇ) | ಸುಳ್ಳು ಪ್ರಕರಣಗಳನ್ನು ಸಲ್ಲಿಸುವ ವ್ಯಕ್ತಿಗಳು ಸದರಿ ವೆಚ್ಚಗಳ ಸಂಪೂರ್ಣ ವಿವರಗಳನ್ನು ಒದಗಿಸತಕ್ಕದೆಂಬುದನ್ನು ಖಚಿತ ಪಡಿಸಲು ಸರ್ಕಾರವು ಯಾವುದಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೇ; ಹಾಗಿದ್ದಲ್ಲಿ, ಅದರ ವಿವರಣೆಗಳೇನು? | ಸುಳ್ಳು ಪ್ರಕರಣಗಳನ್ನು ಸಲ್ಲಿಸುವ ವ್ಯಕ್ತಿಗಳಿಂದ ವೆಚ್ಚಗಳನ್ನು ಭರಿಸುವ ಕುರಿತಂತೆ ಬಿ.ಎನ್.ಎಸ್ 2023 ರ ಕಲಂ 273 ರಡಿಯಲ್ಲಿ ಸಮಂಜಸ ಕಾರಣವಿಲ್ಲದೆ ಮಾಡಿದ ಅಪಾದನೆಗಾಗಿ ಘನ ನ್ಯಾಯಾಧೀಶರು ಬಿ.ಎನ್.ಎಸ್ 2023 ರ ಕಲಂ 273(1), 273(2) ಮತ್ತು 273(3) ರಡಿಯಲ್ಲಿ ಸುಳ್ಳು ದೂರು ನೀಡಿದ ವ್ಯಕ್ತಿಗಳಿಂದ ಪರಿಹಾರವನ್ನು/ವೆಚ್ಚವನ್ನು ನೀಡಲು ಆದೇಶಿಸುವ ಅವಕಾಶವಿರುತ್ತದೆ. |

ಸಂಖ್ಯೆ: ಹೆಚ್‌ಡಿ 46 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು